# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1012
ಸದಸ್ಯರ ಹೆಸರು : ಶ್ರೀ ಅಡಗೂರು ಹೆಚ್. ವಿಶ್ವನಾಥ
(ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 18.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಸಬಾ ಹೋಬಳಿ, ಬೀರೇಶ್ವರಪುರ ಗ್ರಾಮದ ವ್ಯಾಪ್ತಿಗೆ ಸೇರಿದ ಸರ್ವೆ ನಂ.96ರಲ್ಲಿನ ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡಿರುವವರನ್ನು ತೆರವುಗೊಳಿಸಿ ಸದರಿ ಗೋಮಾಳವನ್ನು ಶಾಶ್ವತವಾಗಿ ಮೀಸಲಿಡಲು ಸರ್ಕಾರದಿಂದ ಕ್ರಮವಹಿಸಲಾಗಿದೆಯೇ; | ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಸಬಾ ಹೋಬಳಿಯ ಬೀರೇಶ್ವರಪುರ ಗ್ರಾಮದ ಸ.ನಂ 96 ರಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣಕ್ಕಾಗಿ 36 ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳು ಬಗರ್ ಹುಕ್ಕುಂ ತಂತ್ರಾಂಶದಲ್ಲಿ ನಮೂದಾಗಿವೆ. ಈ ಗ್ರಾಮವು ನಾಗಮಂಗಲ ಪುರಸಭೆ ವ್ಯಾಪ್ತಿಗೆ ಬರುವುದರಿಂದ ಸ್ವೀಕೃತವಾಗಿರುವ ಅರ್ಜಿಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ರಹ ಇರುವುದಿಲ್ಲ. ಈಗಾಗಲೇ ನಮೂನೆ 53 ರಲ್ಲಿ ಸ್ವೀಕೃತಿಯಾಗಿರುವ 11 ಅರ್ಜಿಗಳನ್ನು ತಿರಸ್ಕರಿಸಲು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |
| (ಆ) | ಕಳೆದ ಅಧಿವೇಶನಗಳಲ್ಲಿ ತೆರವುಗೊಳಿಸಲಾಗುವುದೆಂದು ಸರ್ಕಾರವು ಭರವಸೆ ನೀಡಿದ್ದು, ಈ ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡುವವರಿಂದ ಇದುವರೆವಿಗೂ ತೆರವುಗೊಳಿಸದಿರಲು ಕಾರಣಗಳೇನು? | ಈಗಾಗಲೇ ನಮೂನೆ 53 ರಲ್ಲಿ ಸ್ವೀಕೃತಿಯಾಗಿರುವ 11 ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ತಿರಸ್ಕರಿಸಲು ಕ್ರಮವಹಿಸಲಾಗುವುದು. ನಮೂನೆ 57 ರಲ್ಲಿ 25 ಅರ್ಜಿಗಳು ತಿರಸ್ಕೃತವಾಗಲು ಬಾಕಿ ಇರುತ್ತವೆ. ಸ.ನಂ 96 ರಲ್ಲಿ ಸ್ವೀಕೃತವಾಗಿರುವ ಎಲ್ಲಾ ಅರ್ಜಿಗಳು ತಿರಸ್ಕೃತಗೊಂಡ ಕೂಡಲೇ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುವುದು. |
| (ಇ) | ಈ ಗೋಮಾಳವು ನಾಗಮಂಗಲ ಪುರಸಭೆ ವ್ಯಾಪ್ತಿಯಿಂದ 4 ಕಿಲೋ ಮೀಟರ್ ಒಳಗೆ ಇರುವುದರಿಂದ The Karnataka Land Revenue (REGULATISATION OF UN-AUTHORISED OCCUPATION LANDS) RULES 1970 (2)IVರನ್ವಯ ಕೂಡಲೇ ಅಕ್ರಮವಾಗಿ ಸಾಗುವಳಿ ಮಾಡಿರುವ/ಆಕ್ರಮಿಸಿಕೊಂಡಿರುವುದರಿಂದ | ಈಗಾಗಲೇ ನಮೂನೆ 53 ಹಾಗೂ ನಮೂನೆ 57 ರಲ್ಲಿ ಸ್ವೀಕೃತವಾಗಿರುವ ಅರ್ಜಿಗಳು ನಿಯಮಾನುಸಾರ ತಿರಸ್ಕೃತಗೊಂಡ ಕೂಡಲೇ ಸರ್ಕಾರಿ ಜಮೀನಿನ ಒತ್ತುವರಿಯನ್ನು ತ್ವರಿತವಾಗಿ ತೆರವುಗೊಳಿಸಲಾಗುವುದು. |

| | | |
|---|---|---|
| | ತೆರವುಗೊಳಿಸಲು ಯಾವ ಕಾಲಮಿತಿಯಲ್ಲಿ ಸರ್ಕಾರ ಕ್ರಮವಹಿಸುವುದು; | |
| (ಈ) | ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರಿಂದ ತೆರವುಗೊಳಿಸದೇ ಯಾವುದೇ ಕ್ರಮಕೈಗೊಳ್ಳದೇ ನಿಷ್ಕ್ರಿಯರಾಗಿರುವ ಜಿಲ್ಲಾಧಿಕಾರಿಗಳು, ತಹಸೀಲ್ದಾರ್, ನಾಗಮಂಗಲ - ಕಂದಾಯಾಧಿಕಾರಿ/ಕಂದಾಯ ನಿರೀಕ್ಷಕ ಹಾಗೂ ಗ್ರಾಮ ಆಡಳಿತಾಧಿಕಾರಿಗಳ ವಿರುದ್ಧ ಯಾವ ಕ್ರಮಕೈಗೊಳ್ಳಲಾಗುವುದು? | |

(ಕಡತ ಸಂಖ್ಯೆ:ಆರ್‌ಡಿ 39 ಎಲ್‌ಜಿವ್ಯೆ 2024)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು